

# ನಿರ್ದೇಶನದ ಒಲವಿನಲಿ ಐಶಾನಿ

ವಾಸ್ತುಪ್ರಕಾರ, ಧರಣಿ ಮಂಡಲ ಮಧ್ಯದೊಳಗೆ, ನಡುವೆ ಅಂತರವಿರಲಿ, ಪ್ಲಸ್ ಮುಂತಾದ ಸಿನಿಮಾಗಳಲ್ಲಿ ಅಭಿನಯಿಸಿರುವ ನಟಿ ಐಶಾನಿ ಶೆಟ್ಟಿ ಇದೀಗ ನಿರ್ದೇಶನದತ್ತ ತಮ್ಮ ಚಿತ್ತ ಹೊರಳಿಸಿದ್ದಾರೆ. ಫೀಚರ್ ಸಿನಿಮಾವೊಂದನ್ನು ನಿರ್ದೇಶಿಸುತ್ತಿದ್ದು, ಅದರಲ್ಲಿ ನಟಿಸುತ್ತಿದ್ದಾರೆ ಕೂಡ. ತಮ್ಮ ಚೊಚ್ಚಿಲ ಪ್ರಯತ್ನದ ಕುರಿತು 'ಸುಧಾ'ದೊಂದಿಗೆ ಅವರು ಮಾತನಾಡಿದ್ದಾರೆ.

**■ ಸುಮಲತಾ ಎನ್.**

**◆ ನಟಿಯಾಗಿದ್ದ ನಿಮ್ಮಲ್ಲಿ ನಿರ್ದೇಶನದ ಆಸೆ ಚಿಗುರಿದ್ದು ಹೇಗೆ?**

ಮೊದಲನೇ ಸಿನಿಮಾ ಮಾಡುತ್ತಿದ್ದಾಗಲೇ ಸಿನಿಮಾ ಮೇಕಿಂಗ್ ಬಗ್ಗೆ ಆಸಕ್ತಿ ಶುರುವಾಗಿತ್ತು. ಜೊತೆಗೆ, ಚಿಕ್ಕಪುಟ್ಟ ಕಥೆಗಳನ್ನು ಬರೆಯುತ್ತಿದ್ದೆ. ನಟನೆಗೆ ಇಳಿದ ಮೇಲೆ, ನನ್ನ ಕಥೆಗಳನ್ನು ನಾನೇ ನಿರ್ದೇಶನ ಮಾಡಬಹುದಲ್ಲ ಎಂಬ ಆಲೋಚನೆ ಬಂದಿತ್ತು. ನಟಿಸುತ್ತಲೇ, ಸಾಕಷ್ಟು ತಾಂತ್ರಿಕ ವಿಷಯಗಳನ್ನು ಆನ್‌ಸೆಟ್ ಕಲಿತಿದ್ದೆ. ನಾನು ಓದಿದ್ದ ಕೋರ್ಸ್‌ನಲ್ಲಿ ಕೂಡ 'ಸಿನಿಮಾ' ಒಂದು ವಿಷಯವಾಗಿತ್ತು. ಹೀಗಾಗಿ ಸಿನಿಮಾ ನಿರ್ದೇಶನದ ಬಗ್ಗೆ ಆಸಕ್ತಿ ಮೊದಲಿನಿಂದಲೇ ಇತ್ತು. 'ಕಾಜಿ' ಎನ್ನುವ ಕಿರುಚಿತ್ರವನ್ನೂ ಮಾಡಿದ್ದೆ. ಸಿನಿಮಾರಂಗದ ನನ್ನ ಸ್ನೇಹಿತರು, 'ನಿಮ್ಮ ಆಲೋಚನೆ ಚೆನ್ನಾಗಿದೆ, ಒಂದು ಫೀಚರ್ ಸಿನಿಮಾ ಮಾಡಿ' ಎಂದು ಬೆಂಬಲಿಸಿದರು.

ನಟಿಯಾಗಿ ಕೂಡ ನನಗೆ ಬೇರೆ ಬೇರೆ ರೀತಿಯ ಕಥೆಗಳನ್ನು, ಪಾತ್ರಗಳನ್ನು ಎಕ್ಸ್‌ಪ್ಲೋರ್ ಮಾಡಬೇಕೆಂಬ ಆಸೆಯಿದೆ. ನಾನು ಮಾಡಬೇಕು ಎಂದು ಬಯಸಿದ್ದ ಸಿನಿಮಾ, ಪಾತ್ರಗಳನ್ನು ನಾನೇ ಸೃಷ್ಟಿಸಬಹುದಲ್ಲ ಎಂಬ ಆಲೋಚನೆಯೇ ಈ ಪ್ರಯತ್ನಕ್ಕೆ ಮುನ್ನುಡಿ.

**◆ ಈ ಸಿನಿಮಾ ಮೂಲಕ ಏನನ್ನು ಹೇಳಲು ಹೊರಟಿದ್ದೀರಿ?**

ಈ ಸಿನಿಮಾದ್ದು ಮಹಿಳಾ ಪ್ರಧಾನ ಕಥೆ. ಕಂಟೆಂಟ್ ಆಧರಿತ ಸಿನಿಮಾ. ನನ್ನ ಊರು ಪುತ್ತೂರು. ಅಲ್ಲಿನ ಸಂಸ್ಕೃತಿ, ಭಾಷೆ, ಪರಿಸರದ ಬಗ್ಗೆ ನನಗೆ ಚಿಕ್ಕಂದಿನಿಂದಲೂ ಹೆಚ್ಚು ಒಲವು. ಹೀಗಾಗಿ ಕಥೆ ಕೂಡ ಊರಿನ ಬೇರನ್ನೇ ಒಳಗೊಂಡಿದೆ. ಕಥೆ ಸಿದ್ಧವಾಗಿದೆ. ತಂಡವೂ ರೂಪುಗೊಂಡಿದೆ. ಸದ್ಯ ಸಂಭಾಷಣೆ ಬರವಣಿಗೆ ಪ್ರಕ್ರಿಯೆ ನಡೆಯುತ್ತಿದೆ.

**◆ ನಿರ್ದೇಶನದಲ್ಲಿ ನಿಮ್ಮ ಮೊದಲ ಹೆಜ್ಜೆಯಿದು. ಸದ್ಯದ ಅನುಭವ?**

ನನ್ನ ಸಾಮರ್ಥ್ಯವನ್ನು ಬೇರೆಯವರು ಗುರುತಿಸಿದರೆ ಒಂದು ಹೆಜ್ಜೆ ಮುಂದೆ ಹೋಗಲು ಪ್ರೇರಣೆ. ಆ ಪ್ರೇರಣೆಯನ್ನು ನನಗೆ ಹಲವರು ನೀಡಿದ್ದಾರೆ. ನಟಿಯಾಗಿದ್ದಾಗಲೂ ಒಂದು ಕಥೆ ಅಥವಾ ಪಾತ್ರವನ್ನು ಆರಿಸಿಕೊಳ್ಳುವ ಮುನ್ನ ತುಂಬಾ ಯೋಚಿಸಿ ಮುಂದಡಿ ಇಡುತ್ತಿದ್ದೆ. ಹೀಗಾಗಿಯೇ ಕೆಲವೇ ಸಿನಿಮಾಗಳಲ್ಲಿ ಅಭಿನಯಿಸಿದೆ. ನಿರ್ದೇಶನದ್ದೂ ಅಷ್ಟೇ ಜವಾಬ್ದಾರಿ. ಆದರೆ ನನ್ನ ಆಯ್ಕೆಯ ಬಗ್ಗೆ ತೃಪ್ತಿಯಿದೆ.

**◆ ಸಿನಿಮಾದಲ್ಲಿ ಹೆಣ್ಣನ್ನು ಯಾವ ರೀತಿ ಬಿಂಬಿಸಬೇಕೆಂಬ ಆಲೋಚನೆಯಿದೆ?**

80ರ ದಶಕದಲ್ಲಿ ಸುಂದರ ಸಿನಿಮಾಗಳು ಬರುತ್ತಿದ್ದವು. ಕಾದಂಬರಿ ಆಧರಿತ ಕಥೆಗಳಲ್ಲಿ ಹೆಣ್ಣುಮಕ್ಕಳ ಪಾತ್ರಗಳನ್ನು ಬಹಳ ಸುಂದರವಾಗಿ ಚಿತ್ರಿಸುತ್ತಿದ್ದರು.